RESEARCH ARTICLE

INDIAN JOURNAL OF
MULTILINGUAL RESEARCH AND DEVELOPMENT

Asian Research Association

DOI: 10.54392/ijmrd2142

# The impact of Education on the Student, Family and Society as a result of Covid-19 in India

## ಭಾರತದಲ್ಲಿ ಕೋವಿಡ್-19 ರ ಪರಿಣಾಮವಾಗಿ ವಿದ್ಯಾರ್ಥಿ, ಕುಟುಂಬ ಹಾಗೂ ಸಮಾಜದ ಮೇಲೆ ಉಂಟಾದ ಶಿಕ್ಷಣದ ಪ್ರಭಾವಗಳು

**Chendappa Rajappa Kambar [a,*], Geeta Rajashekhar Pattar [a,*]**

[a] Department of Social Justice and Empowerment, Dr. Ambedkar International Centre, DAIC, 15, Janpath, New Delhi, India.
*Corresponding author Email: crkpdf@gmail.com

DOI: https://doi.org/10.54392/ijmrd2142
Received: 29-07-2021; Revised: 09-11-2021; Accepted: 11-11-2021 Published: 15-11-2021

**Abstract:** The Covid-19, which shocked the whole world and created a riot, is well known to the common man today. Covid-19 has already been declared as a pandemic under the Infectious Diseases Act-1897. It is noteworthy that the pandemic has not only directly caused harm to man, but also indirectly caused him to discontinuing his academic, economic and social activities with considerable damage. The virus, which first appeared in China in December 2019, appeared first in India on 30th January 2020, on a student returning to Kerala from Wuhan University, China. Since then, the Covid-19 pandemic has spread in India and killed 4,18,987 people till 22 July 2021. As a result of this horror, many of the country's historic buildings, religious sectors, entertainment mansions, railways, courts, administrative sectors and educational institutions were officially closed, causing considerable problems in Indian Society. Against that backdrop, the present article seeks to address how and why Covid-19 has impacted Students, Families, Educational Institutions and Society in relation to academic life.

**Keywords:** Influence on students, Influence on families, Influence on society and educational institutions

**Language:** **Kannada**

## About the Author



**Dr. Chendappa Rajappa Kambar,** Currently working as a Post-Doctoral Fellow at Dr. Ambedkar International Centre, New Delhi. He holds Master of Social work (MSW)., and Ph.D.(Ph.D. in the field of Social Work). His research interest includes Social Problems and Prospects and Subaltern Sections of the Indian Society. Author Published 21 Research Articles in reputed Journals and authored Eight Books, presented and conducted Seminars, Workshops, Conferences at National and International Platforms. He has been Faculty at the Department of Social Work, Vijayanagar SriKrishnadevaraya University Bellary (P.G.Centre Koppal) and Government Degree College, Yadagiri.

## ಪರಿಚಯ

ಪ್ರಸ್ತುತ ಸಾಮಾಜಿಕ ಸಮಸ್ಯೆಗಳಲ್ಲಿಯೂ ಒಂದಾಗಿರುವ ಕೋವಿಡ್-೧೯ ಇಂದು ಭಾರತದ ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ವಲಯಗಳಲ್ಲಿ ಸಾಕಷ್ಟು ತೊಂದರೆಯನ್ನು ಕೊಟ್ಟು ಅವುಗಳನ್ನು ಪುನಶ್ಚೇತನಗೊಳ್ಳದಂತೆ ಮಾಡುತ್ತಿದೆ. ವಿಶ್ವವನ್ನೇ ಬೆಚ್ಚಿಬೀಳಿಸಿ, ಜಗತ್ತಿನಾದ್ಯಂತ ಕೋಲಾಹಲ ಸೃಷ್ಟಿಸಿದ ಕೋವಿಡ್-೧೯ ಇಂದು ಸರ್ವಸಾಮಾನ್ಯರಿಗೆ ಪರಿಚತವಾಗಿರುವಂತಹ ವಿಷಾಣು. ಡಿಸೆಂಬರ್ ೨೦೧೯ ಚೀನಾದಲ್ಲಿ ಹುಟ್ಟಿದೆ ಎಂದು ಹೇಳಲಾಗುತ್ತಿರುವ ಇದು ಚೀನಾ ದೇಶವೊಂದೇ ಅಲ್ಲದೇ ಪ್ರಪಂಚದ ಹಲವು ವಿದೇಶಗಳಲ್ಲಿನ ಪ್ರತಿಯೊಬ್ಬ ಮಾನವನನ್ನು ಅಚ್ಚರಿಗೊಳಿಸಿ ಅವನಿಗೆ, ಅವನ ಜೀವನಕ್ಕೆ ನಷ್ಟ ಮತ್ತು ಆತಂಕವನ್ನುಂಟು ಮಾಡಿದ್ದಲ್ಲದೇ, ಅವನ ಸರ್ವಾಂಗೀಣ

ಅಭಿವೃದ್ಧಿಗೆ ಅಡ್ಡಿಯುನ್ನುಂಟು ಮಾಡಿದೆ. ಕೋವಿಡ್-19 ಅನ್ನು ಸಾಂಕ್ರಾಮಿಕ ರೋಗಗಳ ಕಾಯ್ದೆ-1897ರ ಪ್ರಕಾರ ಸಾಂಕ್ರಾಮಿಕ ರೋಗವೆಂದು ಹೀಗಾಗಲೇ ಘೋಷಿಸಲಾಗಿದೆ. ಈ ಸಾಂಕ್ರಾಮಿಕ ರೋಗ ಪ್ರತ್ಯೇಕವಾಗಿ ಮನುಷ್ಯನಿಗೆ ಹಾನಿವುಂಟು ಮಾಡಿದರೂ ಸಹ ಪರೋಕ್ಷವಾಗಿ ಅವನ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಸ್ಥಗಿತಗೊಳ್ಳುವಂತೆ ಮಾಡಿದ್ದಲ್ಲದೆ ಸಾಕಷ್ಟು ನಷ್ಟವನ್ನು ನೀಡಿದೆ ಮತ್ತು ಅವನ ಅವನತಿಗೂ ಕಾರಣವಾಗಿದ್ದನ್ನು ಗಮನಿಸಬೇಕಾಗಿದೆ. ವಿಶ್ವದಲ್ಲಿಯೇ ಮೊದಲಿಗೆ ಚೀನಾದಲ್ಲಿ ಡಿಸೆಂಬರ್ 2019ರಲ್ಲಿ ಕಾಣಿಸಿಕೊಂಡ ವೈರಸ್, ಭಾರತದಲ್ಲಿ 30 ಜನವರಿ 2020ರಂದು ಚೀನಾದ ವುಹಾನ್ ವಿಶ್ವವಿದ್ಯಾಲಯದಿಂದ ಕೇರಳಕ್ಕೆ ಮರಳಿದ ವಿದ್ಯಾರ್ಥಿನಿಗೆ ಮೊದಲಬಾರಿಗೆ ಕಾಣಿಸಿಕೊಂಡಿತು. ಅಂದಿನಿಂದ ಭಾರತದಲ್ಲಿ ಹರಡಿಕೊಂಡ ಕೋವಿಡ್-19 ಮಹಾಮಾರಿ 22 ಜುಲೈ 2021ರ ವರೆಗೆ 4,18,987 ಜನರನ್ನು ಬಲಿ ಪಡೆದುಕೊಂಡಿದೆ. ಇದರ ಭೀಕರತೆಯ ಪರಿಣಾಮವಾಗಿ ದೇಶದ ಹಲವು ಐತಿಹಾಸಿಕ ಕಟ್ಟಡಗಳು, ಧಾರ್ಮಿಕ ಕ್ಷೇತ್ರಗಳು, ಮನರಂಜನ ಮಹಲುಗಳು, ರೈಲ್ವೆ ಒಳಗೊಂಡಂತೆ ಹಲವು ಸಾರಿಗೆ ಸಂಸ್ಥೆಗಳು, ನ್ಯಾಯಾಲಯಗಳು, ಆಡಳಿತದ ಹಲವಾರು ಕ್ಷೇತ್ರಗಳು, ಆರ್ಥಿಕ ವಹಿವಾಟುಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು ಅಧಿಕೃತವಾಗಿ ಮುಚ್ಚಲ್ಪಟ್ಟಿದ್ದರಿಂದ ಭಾರತೀಯ ಸಮಾಜದಲ್ಲಿ ಸಾಕಷ್ಟು ಸಮಸ್ಯೆಗಳು ಸೃಷ್ಠಿಯಾದವು. ಆ ಹಿನ್ನಲೆಯಲ್ಲಿ ಶೈಕ್ಷಣಿಕ ಜೀವನಕ್ಕೆ ಸಂಬಂಧಿಸಿದಂತೆ ಶಿಕ್ಷಣವು ವಿದ್ಯಾರ್ಥಿ, ಕುಟುಂಬ, ಶಿಕ್ಷಣದ ಸಂಸ್ಥೆಗಳು ಹಾಗೂ ಸಮಾಜದ ಮೇಲೆ ಕೋವಿಡ್-19 ಯಾವ ರೀತಿಯಾಗಿ ಪ್ರಭಾವ ಬೀರಿದೆ ಮತ್ತು ಯಾವ ಯಾವ ಸಮಸ್ಯೆಗಳಿಗೆ ಕಾರಣವಾಗಿದೆ ಎನ್ನುವುದನ್ನು ಕುರಿತಾಗಿ ಪ್ರಸ್ತುತ ಲೇಖನ ಸಾದರಪಡಿಸಲು ಪ್ರಯತ್ನಿಸುತ್ತದೆ

ಕೋವಿಡ್-೧೯ ಮಹಾಮಾರಿ ಖಾಯಿಲೆ ಪ್ರತ್ಯೇಕವಾಗಿ ಮಾನವನ ಆರೋಗ್ಯದ ಮೇಲೆ ಪರಿಣಾಮ ಬೀರಿದ್ದನ್ನು ದಿನಾಂಕ 13-5-2021ರ ವರೆಗಿನ ಅಂಕಿ ಸಂಖ್ಯೆಗಳ ಪ್ರಕಾರ ಅವಲೋಕಿಸಿದಾಗ ಮೊದಲಿಗೆ ವಿಶ್ವದಲ್ಲಿ ಒಟ್ಟು ಪ್ರಕರಣಗಳು ೧೬.೦೬ ಕೋಟಿ, ಸಕ್ರಿಯ ಪ್ರಕರಣ ೧.೮೯ ಕೋಟಿ, ಗುಣಮುಖ ೧೩.೮೪ ಕೋಟಿ, ಸಾವು ೩೩.೩೬ ಲಕ್ಷ, ವಿಶ್ವದಲ್ಲಿ ಒಂದು ದಿನದ ಹೊಸ ಪ್ರಕಣ ೭.೧೬ ಲಕ್ಷ, ವಿಶ್ವದಲ್ಲಿ ಒಂದು ದಿನದ ಸಾವು ೧೩.೪೨೪. ಭಾರತದಲ್ಲಿ ಒಟ್ಟು ಪ್ರಕರಣಗಳು ೨.೩೬ ಕೋಟಿ, ಸಕ್ರಿಯ ಪ್ರಕರಣ ೩೭.೧೫ ಲಕ್ಷ, ಗುಣಮುಖ ೧.೯೬ ಕೋಟಿ, ಸಾವು ೨.೫೮೭ ಲಕ್ಷ, ಭಾರತದಲ್ಲಿ ಒಂದು ದಿನದ ಹೊಸ ಪ್ರಕಣ ೨.೮೯ ಲಕ್ಷ, ಭಾರತದಲ್ಲಿ ಒಂದು ದಿನದ ಸಾವು ೨,೯೭೧.[1] (ಪ್ರಜಾವಾಣಿ ದಿನಪತ್ರಿಕೆ 2021) ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಕೇವಲ ಪ್ರತ್ಯೇಕವಾಗಿ ಅಷ್ಟೇ ಪರಿಣಾಮ ಬೀರದೆ ಪರೋಕ್ಷವಾಗಿ ಅವನ ಸಮಾಜದ ಮೇಲೆ ಅದರಲ್ಲಿ ಮುಖ್ಯವಾಗಿ ಸಮಾಜದ ಅಭಿವೃದ್ಧಿ ಪಡಿಸುವಲ್ಲಿ ಮುಖ್ಯ ಕಾರಣವಾದ ಶಿಕ್ಷಣ ವಲಯಗಳಲ್ಲಿ ಪ್ರಭಾವ ಬೀರಿ ಶೈಕ್ಷಣಿಕ ರಂಗವನ್ನೇ ಕುಂಠಿತಗೊಳಿಸಿರುವುದು ಆತಂಕಕಾರಿಯಾದ ಬೆಳವಣಿಗೆ ಆಗಿದೆ. ಕೋವಿಡ್-೧೯ ಮಹಾಮಾರಿ ವೈರಸ್ ಸಮಾಜದಲ್ಲಿ ಅಶಾಂತಿಯನ್ನು ನೀಡಿದ್ದಲ್ಲದೇ ಸಾಕಷ್ಟು ತೊಂದರೆಯನ್ನು ನೀಡಿದೆ. ಮುಖ್ಯವಾಗಿ ಸಮಾಜದ ಹಲವು ಕ್ಷೇತ್ರಗಳಲ್ಲಿ ಪ್ರಭಾವ ಬೀರಿದಂತೆ ಶಿಕ್ಷಣದ ಮೇಲೆ ಸಾಕಷ್ಟು ತೊಂದರೆಯನ್ನು ಕೊಟ್ಟಿದ್ದು ಯಾರೂ ಮರೆಯುವಂತಿಲ್ಲ. ಇದರಿಂದಾಗಿ ಸಮಾಜದಲ್ಲಿನ ಬಹುತೇಕ ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳು ಮುಚ್ಚಲ್ಪಟ್ಟವು. ಇದರಿಂದ ಶಿಕ್ಷಣ ಕುಂಠಿತಗೊಂಡಿದ್ದು ಶಿಕ್ಷಣದ ಹಿಂದುಳಿವಿಕೆಗೆ ಒಂದು ಕಾರಣವಾಗಿದೆ. ಜೊತೆಯಲ್ಲಿ ಸಮಾಜ ಯಾವ ಶಿಕ್ಷಣ ಎಂಬ ಸಾಧನದಿಂದ ವಿಕಾಸನಗೊಳ್ಳಬೇಕಿತ್ತೋ ಅದಾಗಿಲ್ಲದಿರುವುದು ಖೇದದ ಸಂಗತಿ. ಇಂದರಿಂದಾಚೆಗೆ ಶಿಕ್ಷಣವನ್ನು ಪಡೆಯುವಂತಹ ಅನೇಕರು ವ್ಯರ್ಥ ಸಮಯ ಆಳುಮಾಡಿಕೊಳ್ಳುವುದಲ್ಲದೆ, ಖರ್ಚು ಮಾಡಿಕೊಳ್ಳುವುದರ ಮೂಲಕ ಆಶಿಸ್ತು, ದುರ್ನಡತೆ, ಅನೈತಿಕ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದು, ಅನಾಚಾರ, ಅಪರಾಧಿ, ದುಶ್ಚಟಗಳಂತಹ ಸಮಸ್ಯೆಗಳಲ್ಲಿ ಸಿಕ್ಕಿದ್ದು ದಿನಂಪ್ರತಿ ಸಮಾಜದಲ್ಲಿ ನೋಡುತ್ತಿದ್ದೇವೆ, ಕೇಳುತ್ತಿದ್ದೇವೆ. ಈ ಹಿನ್ನಲೆಯಲ್ಲಿ ಶಿಕ್ಷಣದ ಮೇಲೆ ಪ್ರಭಾವ ಬೀರಿರುವ ಹಲವು ಕ್ಷೇತ್ರಗಳಲ್ಲಿ ಬಹುಮುಖ್ಯವಾಗಿ ವಿದ್ಯಾರ್ಥಿಗಳ ಮೇಲೆ, ಪಾಲಕರ ಮೇಲೆ, ಶಿಕ್ಷಣ ಸಂಸ್ಥೆಗಳ ಮೇಲೆ ಹಾಗೂ ಸಮಾಜದ ಮೇಲೆ ಬೀರಿರುವ ಪ್ರಭಾವಗಳು ಸಾಕಷ್ಟಿವೆ.

## ಶಿಕ್ಷಣ

ಭಾರತದಲ್ಲಿ ಇದುವರೆಗೆ ಪ್ರಾಥಾಮಿಕ, ಮಾದ್ಯಮಿಕ ಮತ್ತು ಉನ್ನತ ಶಿಕ್ಷಣಗಳೆಂಬುದಾಗಿ ಮೂರು ಪ್ರಕಾರಗಳಲ್ಲಿ ಶಿಕ್ಷಣದ ವ್ಯವಸ್ಥೆಗಳಿದ್ದದ್ದು ನಮ್ಮೆಲ್ಲರಿಗೂ ತಿಳಿದಿರುವ ಸಂಗತಿ. ಇಂದಿನ ಯುಗದಲ್ಲಿ ಶಿಕ್ಷಣದ ಅವ್ಯಶಕತೆ ಏಕೆ ಇರಬೇಕೆಂದರೆ, ಮಾನವ ತನ್ನ ಹಕ್ಕುಗಳನ್ನು ಪಡೆಯಲು, ಸಬಲೀಕರಣಗೊಳ್ಳಲು, ತನ್ನ ಆಸ್ಮಿತೆಯನ್ನು ಉಳಿಸಿಕೊಳ್ಳಲು, ಆತ್ಮವಿಶ್ವಾಸ ಬೆಳೆಸಲು, ಜೀವನದಲ್ಲಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳಲು, ದೌರ್ಜನ್ಯ, ಶೋಷಣೆಗಳಿಂದ ತನ್ನಿಷ್ಟಕ್ಕೆ ತಾನೇ ರಕ್ಷಿಸಿಕೊಳ್ಳಲು ಶಿಕ್ಷಣ ಸಹಾಯ ಮಾಡುತ್ತದೆ. ಆದ್ದರಿಂದ ಶಿಕ್ಷಣ ಒಂದು ಶಕ್ತಿ ಇದ್ದಂತೆ ಭಾರತ ಸಂವಿಧಾನದ ಪ್ರಕಾರ ಸ್ತ್ರೀ-ಪುರುಷಬ್ಬರಿಗೂ ಸಮಾನತೆ, ಸ್ವಾತಂತ್ರ್ಯವನ್ನು ಮೂಲಭೂತ ಹಕ್ಕಾಗಿ ೧೯೫೦ರಲ್ಲಿ ನೀಡಲಾಗಿದೆ. ವಿದ್ಯಾಭ್ಯಾಸದಲ್ಲಿ ಕೂಡ ಸರಿಸಮಾನದ ಹಕ್ಕುಗಳಿವೆ.[2](ಕಂಬಾರ ಸಿ.ಆರ್.ಶೆಟ್ಟಿಕೇರಾ, 2019) ಸಮಾಜದ ಶೈಕ್ಷಣಿಕ ಸ್ಥಿತಿಗತಿಗಳನ್ನು ಅವಲೋಕಿಸಿದರೆ, ಇಂದು ಪ್ರತಿಯೊಬ್ಬ ವ್ಯಕ್ತಿಗೂ ಶಿಕ್ಷಣ ಅಗ್ಯತವಾಗಿ ಬೇಕಾಗಿದೆ. ಮಾನವನ ಬದುಕಿಗೆ ಗಾಳಿ, ನೀರು, ಬೆಳಕು ಮತ್ತು ಆಹಾರದಂತೆ ಶಿಕ್ಷಣವು ಸುಸಜ್ಜಿತ ಜೀವನಕ್ಕೆ ಅನಿವಾರ್ಯವಾಗಿದೆ. ಹಿಂದೆ ಜನರು ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುತ್ತಿರಲಿಲ್ಲ: ಅದರ ಅಗತ್ಯವು ಅವರಿಗೆ ತಿಳಿದಿರಲಿಲ್ಲ. ಆದರೆ ಸಮಾಜ ನಿಂತ ನೀರಲ್ಲ, ಹರಿಯುವ ಝುರಿಯುಂತೆ ನಿರಂತರ ಪರಿವರ್ತನೆಗೆ ಸಿಲುಕಿ ಕೆಲವೊಮ್ಮೆ ಅನಿವಾರ್ಯವಾಗಿ ಸಮಸ್ಯೆಯಲ್ಲಿಯೇ ಜೀವಿಸುವಂತಹ ಸನ್ನಿವೇಶಗಳನ್ನು ಮರೆಯುವಂತಿಲ್ಲ.

## ವಿದ್ಯಾರ್ಥಿಗಳ ಮೇಲಿನ ಪ್ರಭಾವ

ಆಯಾ ವಿದ್ಯಾರ್ಥಿಗಳು ಆಯಾ ದೇಶವನ್ನು ಬೆಳೆಸುವಲ್ಲಿ ಮತ್ತು ವಿಕಾಸನಗೊಳಿಸುವ ನಿಟ್ಟಿನಲ್ಲಿ ಶಿಕ್ಷಣ ತನ್ನ ಹಿರಿದಾದ ಪಾತ್ರ ನಿರ್ವಹಿಸುತ್ತದೆ. ಆದರೆ ಅದನ್ನೇ ಬುಡ ಕೆಳಗೆ ಮಾಡಿದ ಮಹಾಮಾರಿ ಕೋರೋನಾ ವೈರಸ್ ಪರೋಕ್ಷವಾಗಿ ವಿದ್ಯಾರ್ಥಿಗಳನ್ನು ಸಾಕಷ್ಟು ಸಮಸ್ಯೆಯಲ್ಲಿ ಸಿಕ್ಕಾಕಿಕೊಳ್ಳುವಂತೆ ಮಾಡಿದೆ. ಅವುಗಳಲ್ಲಿ ಮುಖ್ಯವಾಗಿ ಕೇಂದ್ರೀಕರಿಸುವುದಾದರೆ ವಿದ್ಯಾರ್ಥಿಗಳ ಕಲಿಕೆಯಲ್ಲಿ ಹಿಂದುಳಿಯುವಿಕೆ ಇದು ಸಮಾಜಕ್ಕೆ ದೊಡ್ಡದಾದ ಪೆಟ್ಟನ್ನು ಕೊಟ್ಟಿರುವಂತದ್ದು. ಏಕೆಂದರೆ ಪ್ರತಿನಿತ್ಯವಾಗಿ ವಿದ್ಯಾರ್ಥಿಗಳು ಒಂದಲ್ಲ ಒಂದು ವಿಷಯದಲ್ಲಿ ಜ್ಞಾನಾರ್ಜನೆ ಪಡೆದುಕೊಳ್ಳುವಂತವರು. ಆ ಮೂಲಕ ತಮ್ಮ ಜೀವನದ ಗುರಿ ಸಾಧನೆಗೆ ಶಿಕ್ಷಣವನ್ನು ಹೊಂದಿಸಿಕೊಳ್ಳುವಂತದ್ದು ಸರ್ವ ಸಾಮಾನ್ಯ. ಆದರೆ ಅದಕ್ಕೆ ಕೋರೋನಾ ವೈರಸ್ ಕೊಡಲಿ ಪೆಟ್ಟನ್ನು ನೀಡುವ ಮೂಲಕ ನಾಶಗೊಳಿಸಿದೆ. ಇದು ಪ್ರತಿಯೊಂದು ವಿದ್ಯಾರ್ಥಿಗೂ ಅನ್ವಯಿಸಿದ್ದು ಆಗಿದೆ. ಈ ಮೂಲಕ ವಿದ್ಯಾರ್ಥಿಗಳು ತಮ್ಮ ಕಲಿಕೆಯಲ್ಲಿ ಹಿಂದುಳಿಯುವಂತೆ ಈ ಮಹಾಮಾರಿ ನೋಡಿಕೊಂಡಿದೆ. ಜೊತೆಯಲ್ಲಿ ವಿದ್ಯಾರ್ಥಿಗಳನ್ನು ಅಶಿಸ್ತಿನಿಂದ ವರ್ತಿಸುವಂತೆ ಪರೋಕ್ಷವಾಗಿ ಈ ಕೋರೋನ ಕಾರಣೀಕರ್ತವಾಗಿದೆ. ಹೇಗೆಂದರೆ ಯಾವ ವಿದ್ಯಾರ್ಥಿಗಳು ಸದಾ ವಿದ್ಯಾಭ್ಯಾಸದಲ್ಲಿ ನಿರತವಾಗಿರುವರೋ ಅವರಲ್ಲಿ ಅಷ್ಟೇ ಪ್ರಮಾಣದಲ್ಲಿ ಶಿಸ್ತು, ಪ್ರಮಾಣೀಕತೆ, ಒಳ್ಳೆಯ ನಡತೆ, ಮಾನವೀಯ ಮೌಲ್ಯಗಳು ಹೆಚ್ಚು ಹೆಚ್ಚು ಸೇರಿಕೊಳ್ಳುತ್ತವೆ. ಆ ಮೂಲಕ ವ್ಯಕ್ತಿತ್ವ ವಿಕಾಸನಗೊಳ್ಳುತ್ತದೆ. ಆದರೆ ಈ ಕೋರೋನದಿಂದಾಗಿ ಶಿಕ್ಷಣದ ಬದಲಾಗಿ ಆಟೋಟಗಳಲ್ಲಿ ಸಮಯ ಕಳೆಯುವುದು ಆಗಿದೆ. ಇದರೊಂದಿಗೆ ನಿತ್ಯ ನಿರಂತರವಾಗಿ ಜ್ಞಾನವನ್ನು, ಕಲಿಕೆಯನ್ನು, ಶಿಸ್ತು, ಆಚಾರ-ವಿಚಾರಗಳನ್ನು ಹಂತ ಹಂತವಾಗಿ ಕಲಿಯಬೇಕಾದ ಈ ಸಂದರ್ಭಗಳಲ್ಲಿ ಎಲ್ಲವೂ ನಿಂತಿರುವುದರಿಂದ ಸಹಜವಾಗಿ ವಿದ್ಯಾರ್ಥಿಗಳಲ್ಲಿ ವ್ಯಾತ್ಯಾಸ ಕಂಡುಬರುತ್ತದೆ. ಅದು ಎಷ್ಟರ ಮಟ್ಟಿಗೆ ಎಂದರೇ ತಂದೆ-ತಾಯಿಗಳು ಊಹಿಸಲಾರದಷ್ಟು ವಿದ್ಯಾರ್ಥಿಗಳಲ್ಲಿ ಅಶಿಸ್ತು(ಪಾಲಕರು ಹೇಳಿದ ಮಾತು ಕೇಳದಿರುವುದು) ಸರಿಯಾದ ಸಮಯಕ್ಕೆ ಊಟ ಮಾಡದೇ ಇರುವುದು, ಸಮಯ ಪಾಲನೆ ಮಾಡದಿರುವುದು, ಸರಿಯಾದ ನಡತೆಯ ಉಲ್ಲಂಘನೆ ಮುಂತಾದ ಅಶಿಸ್ತಿನಿಂದ ವರ್ತಸುವುದರಿಂದ ಪರೋಕ್ಷವಾಗಿ ಕೋವಿಡ್-೧೯ ಶಿಕ್ಷಣದ ಮೇಲೆ ಪ್ರಭಾವವನ್ನು ಬೀರಿದೆ ಎಂದರೆ ತಪ್ಪಾಗದು.

ನಿತ್ಯನಿರಂತರವಾಗಿ ಶಿಕ್ಷಣದಿಂದ ಸಿಗುವ ಜ್ಞಾನ ಆಕಸ್ಮಿಕವಾಗಿ ನಿಂತಾಗ ವಿದ್ಯಾರ್ಥಿಗಳಲ್ಲಿ ಸಹಜವಾಗಿ ಸೋಮಾರಿತನಕ್ಕೆ ಅವಕಾಶ ಮಾಡಿದಂತಾಗುತ್ತದೆ. ಜೊತೆಯಲ್ಲಿ ವಿದ್ಯಾರ್ಥಿಗಳು ದುಶ್ಚಟಗಳಲ್ಲಿ ಸಿಲುಕಿಕೊಳ್ಳುವುದರಿಂದ ಸಮಾಜ ಬಾಹಿರ ಕೃತ್ಯಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ. ಇವೆಲ್ಲವೂ ಪರೋಕ್ಷವಾಗಿ ಶಿಕ್ಷಣದ ಮಹತ್ವದ ಕಡೆ ಬೆರಳು ಮಾಡುತ್ತವೆ. ಈ ಮೂಲಕ ಶಿಕ್ಷಣಕ್ಕೆ ಎಷ್ಟೊಂದು ಮಹತ್ವವಿದೆಂದು ತಿಳಿಯುತ್ತದೆ. ವ್ಯಕ್ತಿತ್ವ ವಿಕಾಸನಕ್ಕಾಗಿ ವಿದ್ಯಾರ್ಥಿಗಳನ್ನು ಶಾಲಾ, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಸದಾಕಾಲ ಒಂದಲ್ಲೊಂದು ಶೈಕ್ಷಣಿಕ ಕಾರ್ಯ ಚಟುವಟಿಕೆಯಲ್ಲಿ ಬಳಸಿಕೊಳ್ಳುವುದರಿಂದ ಅವರು ಯಾವುದೇ ಕೆಟ್ಟದಾಗಿರುವ ಕೆಲಸಗಳನ್ನು ಮಾಡುಲು ಹೋಗುವುದಿಲ್ಲ. ಆದರೆ ಇವೆಲ್ಲವು ಮುಚ್ಚಲ್ಪಟ್ಟಿರುವುದರಿಂದ ಸಹಜವಾಗಿ ವಿದ್ಯಾರ್ಥಿಗಳ ಮನಸ್ಸು ವಿಚಲಿತಗೊಂಡು ಹೃದಯಕ್ಕೆ ಮತ್ತು ಬುದ್ಧಿಗೆ ಸಂಬಂಧವೇ ಇಲ್ಲವೆಂಬುವಂತೆ ವರ್ತಿಸುತ್ತಾರೆ ಕೆಲವೊಮ್ಮೆ ಅವರು ಮನಸ್ಸಿನ ಮಾತು ಕೇಳಿದರೆ, ಇನ್ನೊಮ್ಮೆ ಬುದ್ಧಿಯ ಮಾತು ಕೇಳುತ್ತಾರೆ. ಈ ದ್ವಂದ್ವ ರೀತಿಯ ವರ್ತನೆಯಿಂದ ಸಮಾಜಕ್ಕೆ ತೊಂದರೆಯನ್ನುಂಟು ಮಾಡುವ ಕೆಲಸಗಳನ್ನು ಮಾಡುವಂತಾಗುತ್ತದೆ. ಈ ದ್ವಂದ್ವ ನೀತಿಯನ್ನು ಉಂಟಾಗಲು ಈ ಮಹಾಮಾರಿ ಕೋವಿಡ್-೧೯ ಶಿಕ್ಷಣಕ್ಕೆ ಪೆಟ್ಟು ಕೊಟ್ಟಿರುವುದು ಒಂದು ಪ್ರಮುಖ ಕಾರಣವಾಗಿದೆ ಎನ್ನುವುದು ಮರೆಯುವಂತಿಲ್ಲ.

## ಕುಟುಂಬದ ಮೇಲಿನ ಪ್ರಭಾವ

'ಮನೆಯೇ ಮೊದಲ ಪಾಠ ಶಾಲೇ ತಂದೆಯೇ ಮೊದಲ ಗುರು' ಎನ್ನುವ ಮಾತು ಸರ್ವಕಾಲಕ್ಕೂ ಸತ್ಯ. ಆಧುನಿಕ ಜೀವನದ ಒತ್ತಡದ ನಡುವೇ ಪಾಲಕರು ಅಥವಾ ಕುಟುಂಬಗಳು ತುಂಬ ಒದ್ದಾಡುತ್ತಿವೆ ಎಂದರೇ ತಪ್ಪಾಗಲಾರದು. ಸಾಮಾನ್ಯ ವರ್ಗದ ಕುಟುಂಬಗಳು ಅಥವಾ ಕಡುಬಡತನದಿಂದ ಕೂಡಿರುವ ಕುಟುಂಬಗಳು 'ಜೀವಕ್ಕಿಂತ ಜೀವನ' ದೊಡ್ಡದು ಎಂಬ ಮನಸ್ಥಿತಿಯನ್ನು ಹೊಂದಿದರೆ, ಶ್ರೀಮಂತ ಕುಟುಂಬಗಳು ಅಥವಾ ಶಕ್ತಿವಂತ ಕುಟುಂಬಗಳು ಜೀವನಕ್ಕಿಂತ ಜೀವ' ದೊಡ್ಡದು ಎನ್ನುವ ಮನೋಭಾವನೆ ಹೊಂದಿರುತ್ತಾರೆ. ಬಡವರಿಗೆ ಜೀವ ದೊಡ್ಡದಾಗಿ ಕಾಣಿಸಿಕೊಳ್ಳುವುದಿಲ್ಲ, ಶ್ರೀಮಂತರಿಗೆ ಜೀವನ ದೊಡ್ಡದಾಗಿ ಅನಿಸುವುದಿಲ್ಲ. ಇವರ ನಡುವ ವ್ಯತ್ಯಾಸವಿದೆ. ಕಾರಣ ಮೇಲ್ನೋಟಕ್ಕೆ ಸರಳವಾಗಿ ಕಾಣಿಸುವುದು ಯಾರಿಗೆ ಯಾವುದು ಮುಖ್ಯವೆಂದು ತಿಳಿಯುತ್ತದೆ. ಎಲ್ಲವನ್ನು ಹೊಂದಿರುವ ಶ್ರೀಮಂತ ಕುಟುಂಬಗಳಿಗೆ ಜೀವ ಮುಖ್ಯವಾದರೆ, ಏನೂ ಇಲ್ಲದ ಬಡವರಿಗೆ ಜೀವನ ಮುಖ್ಯವಾಗಿ ಕಾಣುತ್ತದೆ. ಶ್ರೀಮಂತರಿಗೆ ಜೀವನದ ಹಲವು ಮೆಟ್ಟಿಲುಗಳನ್ನು ಸುರಕ್ಷಿತವಾಗಿ ಮುಟ್ಟಿರುವುದರಿಂದ ಅವರಿಗೆ ಜೀವ ಮುಖ್ಯವಾಗುತ್ತದೆ ವಿನಹ ಜೀವನದ ಮಹತ್ವ ತಿಳಿಯುವುದಿಲ್ಲ. ಇವರಿಬ್ಬರಿಗೂ ಕಾಟ ಕೊಟ್ಟಿರುವುದು ಕೋವಿಡ್-೧೯.

ಇನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಕುಟುಂಬಗಳಲ್ಲಿ ಸಹಜವಾಗಿ ಭಿನ್ನತೆಯನ್ನು ಕಾಣುತ್ತೇವೆ. ನಗರ ಪ್ರದೇಶದಲ್ಲಿನ ಕುಟುಂಬಗಳು ಆಧುನಿಕ ಒತ್ತಡದ ಜೀವನದ ನಡುವೆ ತಮ್ಮ ಮಕ್ಕಳನ್ನು ಗ್ರಾಮೀಣ ಪ್ರದೇಶದಲ್ಲಿನ ಕುಟುಂಬಗಳಂತೆ ಹೆಚ್ಚಾಗಿ ಗಮನಹರಿಸುವುದಿಲ್ಲ. ನಗರದಲ್ಲಿನ ಕುಟುಂಬಗಳು ಮೂಲತಃ ಯಾವಾಗಲೂ ದುಡಿಮೆಯನ್ನು ಆಧರಿಸಿ ಜೀವನ ನಡೆಸುತ್ತಿರುವುದರಿಂದ ಸಹಜವಾಗಿ ಮಕ್ಕಳನ್ನು ನಿರ್ಲಕ್ಷಿಸುತ್ತಾರೆ. ಇನ್ನೂ ಶಿಕ್ಷಣ ನೀಡುವುದಾಗಿ ಹುಟ್ಟಿಕೊಂಡಿರುವ ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳನ್ನು ಕೋವಿಡ್-೧೯ ಮುಚ್ಚಾಕಿರುವುದರಿಂದ ಈ ಕಡೆ ಪಾಲಕರು ತಮ್ಮ ದುಡಿಮೆಯಲ್ಲಿ ನಿರಂತರವಾಗಿ ಸಮಯ ನೀಡಿರುವುದರಿಂದ ಸಹಜವಾಗಿ ಮಕ್ಕಳ ಮೇಲೆ ಹಿಡಿತ ಸಾಧಿಸಲು

ಅಸಾಧ್ಯವಾಗುತ್ತದೆ. ಯಾವಾಗ ಮಕ್ಕಳ ಮೇಲಿನ ಹಿಡಿತ ಸಾಧ್ಯವಾಗುವುದಿಲ್ಲವೋ ಅವಾಗ ಮಕ್ಕಳು ತಮಗಿಷ್ಟ ಬಂದಂತಹ ಕೃತ್ಯಗಳಲ್ಲಿ ತೊಡಗುತ್ತಾರೆ. ಅವರು ಒಳ್ಳೆಯ ಕೆಲಸದಲ್ಲಿ ತೊಡಗಿದರೆ ಪರವಾಗಿಲ್ಲ, ಅವರಲ್ಲಿಯೇ ಅದೇಷ್ಟೋ ಮಕ್ಕಳು ವಿವಿಧ ರೀತಿಯಲ್ಲಿ ಆಕರ್ಷಣೆಗೊಂಡು, ಆಸೆ, ಆಮಿಷ, ಮೋಜು, ಮಸ್ತಿಗೊಳಗಾಗಿ ತಮ್ಮ ಅಮೂಲ್ಯವಾದ ಸಮಯವನ್ನು ಆಳು ಮಾಡಿಕೊಳ್ಳುತ್ತಿರುವುದು ದುಃಖಕರ. ಇದನ್ನು ನಿಯಂತ್ರಿಸಲು ಕುಟುಂಬಕ್ಕೆ ಸಾಧ್ಯವಾಗದಿರುವುದರಿಂದ ಕುಟುಂಬವು ಸಹಜವಾಗಿ ಮಾನಸಿಕ ಒತ್ತಡಕ್ಕೆ ಒಳಗಾಗುತ್ತದೆ. ಕೆಲವೊಮ್ಮೆ ಪಾಲಕರು ಅನಾರೋಗಕ್ಕೆ ತುತ್ತಾಗುತ್ತಾರೆ. ಇನ್ನೂ ಕೆಲವರು ಚಿಂತಕ್ರಾಂತರಾಗಿ ಅಧಿಕ ಸಮಯವನ್ನು ಆಳು ಮಾಡಿಕೊಳ್ಳುವುದರಿಂದ ಕುಟುಂಬದ ಸ್ವಸ್ಥವನ್ನು ಆಳು ಮಾಡಿಕೊಳ್ಳುತ್ತಾರೆ. ಈ ಮೂಲಕ ಕುಟುಂಬಗಳಲ್ಲಿ ಗಂಡ-ಹೆಂಡಿರ ನಡುವೆ ಜಗಳಗಳು, ಅಣ್ಣ-ತಮ್ಮರ ನಡುವೆ ಜಗಳಗಳು, ಅಕ್ಕ-ತಂಗಿಯರ ನಡುವೆ ಜಗಳಗಳು ಸಹಜವಾಗಿ ನಡೆಯುತ್ತವೆ. ಈ ಮೂಲಕ ಕುಟುಂಬದ ವಿಘಟನೆಗೆ, ಕುಟುಂಬಗಳು ಛಿದ್ರಗೊಳ್ಳುವುದಕ್ಕೆ ಪರೋಕ್ಷವಾಗಿ ಈ ಕೋವಿಡ್-೧೯ ಶಿಕ್ಷಣವನ್ನು ನಿಲ್ಲಿಸದ್ದು ಕಾರಣವಾಗುತ್ತದೆ.

ಸರ್ಕಾರ, ಸರ್ಕಾರೇತರ ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳು ಆನ್‌ಲೈನ್ ತರಗತಿಗಳನ್ನು ಆಯೋಜಿಸುವುದು ಸಹಜ. ಆದರೆ ಬಡತನದ ಕುಟುಂಬಗಳು ಆನ್‌ಲೈನ್ ತರಗತಿಗಳಿಗೆ ಅವಕಾಶ ಮಾಡಿಕೊಡಲು ಮಕ್ಕಳಿಗೆ ಮೊಬೈಲ್ ಖರೀಧಿಸಬೇಕಾಗುತ್ತದೆ. ಇದರಿಂದ ಇನ್ನಷ್ಟು ಆರ್ಥಿಕ ಹೊರೆಯನ್ನು ಆ ಕುಟುಂಬ ತಂದುಕೊಳ್ಳುತ್ತದೆ. ಏಕೆಂದರೆ ಸಾಮಾನ್ಯವಾಗಿ ಕೆಲವು ಕುಟುಂಬಗಳಲ್ಲಿನ ತಂದೆ-ತಾಯಿಂದಿರು ಅವಶ್ಯಕನುಗುಣವಾಗಿ ಮಾತ್ರ ಮೊಬೈಲ್ ಬಳಕೆಯನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಈಗ ಮಕ್ಕಳಿಗೆ ಸಾಲ ಮಾಡಿ ಮೊಬೈಲ್ ಕೊಡಿಸುವಷ್ಟರ ಮಟ್ಟಿಗೆ ಬಂದು ನಿಂತಿವೆ. ಈ ಕೋವಿಡ್ ಕೇವಲ ಆರೋಗ್ಯದ ಮೇಲೆ ಪರಿಣಾಮ ಬಿರದೇ ಆರ್ಥಿಕತೆ ಮೇಲೆಯೂ ತನ್ನ ಹಿಡಿತ ಸಾಧಿಸಿದೆ ಎಂದರೆ ತಪ್ಪಾಗಲಾರದು. ಮೊಬೈಲ್ ಬಳಕೆಯಲ್ಲಿ ತಮ್ಮ ಮಕ್ಕಳು ಅದನ್ನು ದುರ್ಬಳಿಕೆಯನ್ನು ಮಾಡಿಕೊಳ್ಳುವುದರ ಮೂಲಕ ಅಂದರೆ ವಯಸ್ಸಿನಲ್ಲದ ವಯಸ್ಸಿನಲ್ಲಿ ಅಶ್ಲೀಲ ಚಿತ್ರಗಳ ವೀಕ್ಷಣೆ, ಅಧಿಕ ವಿಡಿಯೋ ಗೇಮ್, ಜೂಜಾಟಗಳು, ಬೆಟ್ಟಿಂಗ್, ಹುಸಿ ಪ್ರೀತಿ, ಪ್ರೇಮದ ಹೆಸರಲ್ಲಿ ಸಿಲುಕಿಕೊಂಡು ಮನೆ ಬಿಟ್ಟು ಓಡಿ ಹೋಗುವುದರಿಂದ ಅರ್ಧದಲ್ಲಿಯೇ ಶಿಕ್ಷಣ ಮೊಟಕುಗೊಳ್ಳುತ್ತದೆ. ಇದೊಂದು ಕೆಟ್ಟ ಪರಿಣಾಮವನ್ನು ತಂದೊಡ್ಡುತ್ತದೆ. ಅಷ್ಟೇ ಅಲ್ಲದೇ ತಂದೆ-ತಾಯಿಗಳ ಸಮ್ಮತಿ ಇಲ್ಲದೇ ಮದುವೆ ಮಾಡಿಕೊಳ್ಳುವಷ್ಟರ ಮಟ್ಟಿಗೆ ತಮ್ಮ ಜೀವನದ ಬಗ್ಗೆ ತಾವೇ ನಿರ್ಧರಿಸುತ್ತಾರೆ. ಇದರಿಂದ ವಿಚಲಿತಗೊಂಡ ಕುಟುಂಬಗಳು ಸಾಕಷ್ಟು ಚಿಂತನೆಗೆ ಗುರಿಯಾಗುತ್ತವೆ. ಇನ್ನು ಕೆಲವು ಮಕ್ಕಳು ಒಳ್ಳೆಯ ಕೆಲಸಕ್ಕಾಗಿ ಕೊಡಿಸಿರುವ ಮೊಬೈಲ್ ಅನ್ನು ಸರಿಯಾದ ಕೆಲಸಕ್ಕೆ ಬಳಸದೆ, ಸರಿಯಾಗಿ ಶಿಕ್ಷಣವನ್ನು ಕಲಿಯದೇ, ಹಗಲು ರಾತ್ರಿಯನ್ನದೇ ಮೊಬೈಲ್ ಬಳಕೆ ಮಾಡುವುದರಿಂದ ನಿದ್ರಾಹೀನತೆ ಸಮಸ್ಯೆಯನ್ನು ಹೊಂದುವುದು, ಅನಾರೋಗಕ್ಕೆ ತುತ್ತಾಗುವುದು ಅಲ್ಲದೇ ಪಾಲಕರನ್ನು ಆತಂಕಕ್ಕೆ ದೂಡುವುದು, ವಿನಾಹಃ ಕಾರಣ ಕುಟುಂಬಕ್ಕೆ ತಲೆ ನೋವುಂಟು ಮಾಡುವುದು, ಕುಟುಂಬದಲ್ಲಿನ ಸದಸ್ಯರಿಗೆ ತೊಂದರೆಯಲ್ಲಿ ಸಿಕ್ಕಾಕಿಕೊಳ್ಳುವಂತೆ ಮಾಡುತ್ತದೆ. ಒಂದು ವೇಳೆ ಸಹಜವಾಗಿ ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳು ನಿರಂತರವಾಗಿ ಆರಂಭಗೊಂಡಿದ್ದರೆ ಕುಟುಂಬಗಳು, ಮಕ್ಕಳು ಇಂತಹ ಯಾವುದೇ ಸಮಸ್ಯೆಯನ್ನು ಹೆದರಿಸುವಂತಹ ಸಂದರ್ಭ ಬರುತ್ತಿರಲಿಲ್ಲ.

ಆನ್‌ಲೈನ್ ನೆಪದಲ್ಲಿ ಕೆಲವೊಂದು ದುಷ್ಟ ಶಿಕ್ಷಕರು ಮತ್ತು ಶಿಕ್ಷಕಿಯರು ವಿದ್ಯಾರ್ಥಿಗಳನ್ನು ದುರ್ಬಳಿಕೆ ಮಾಡಿಕೊಳ್ಳುವುದರ ಮೂಲಕ, ಅವರನ್ನು ಲೈಂಗಿಕವಾಗಿ ಪ್ರಚೋಧಿಸುವುದರ ಮೂಲಕ ಅವರನ್ನು ಅಡ್ಡ ದಾರಿಗೆ ತಂದು ನಿಲ್ಲಿಸುತ್ತಾರೆ ಆ ಮೂಲಕವಾಗಿ ವಿದ್ಯಾರ್ಥಿಗಳ ಶಿಕ್ಷಣದ ಜೀವನವನ್ನು ಹಾಳು ಮಾಡುತ್ತಿರುವುದು ಅತ್ಯಂತ ಕೆಟ್ಟ ಪದ್ಧತಿಯಾಗಿದೆ. ಇದರಿಂದ ಕುಟುಂಬಗಳು ಸದಾ ಆತಂಕದಲ್ಲಿರುವಂತೆ ಮಾಡುತ್ತದೆ ಆದ್ದರಿಂದ ಆ ಕುಟುಂಬದ ಉತ್ತಮ ಪರಿಸರ ಆಳಾಗುತ್ತದೆ. ಈ ಹಿನ್ನಲೆಯಲ್ಲಿ ಕುಟುಂಬವು ಸಾಕಷ್ಟು ಮಾನಸಿಕ ಸಮಸ್ಯೆಗೊಳಗಾಗುತ್ತದೆ ಎನ್ನುವುದು ಮರೆಯುವಂತಿಲ್ಲ.

ಬಹುತೇಕ ಗ್ರಾಮೀಣ ನಗರ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳನ್ನು ಸಹಜವಾಗಿ ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳು ಮುಚ್ಚಲ್ಪಟ್ಟಿರುವುದರಿಂದ ಪಾಲಕರು ತಮ್ಮ ಮಕ್ಕಳಿಗೆ ವಯಸ್ಸಿನಲ್ಲದೇ ವಯಸ್ಸಿನಲ್ಲಿ ಮದುವೆ ಮಾಡಲು ಆತುರಿಯುತ್ತ ಬಾಲ್ಯವಿವಾಹಗಳನ್ನು ಮಾಡಿರುವುದು ಪತ್ರಿಕ ವರದಿಗಳಿಂದ ತಿಳಿದಿದ್ದೇವೆ ಮತ್ತು ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳ ಕೊರಳಲ್ಲಿ ತಾಳಿ ಇರೋದನ್ನು ಕಂಡಿದ್ದೇವೆ. ಇದು ಶಿಕ್ಷಣಕ್ಕೆ ಮಾರಕವಾದ ಬೆಳವಣಿಗೆಯಾಗಿದೆ, ಇದು ಸಲ್ಲದು. ಇದಕ್ಕೆ ಪೂರಕವಾಗಿ ಕುಟುಂಬಗಳು ತಮ್ಮ ತಮ್ಮ ಮಕ್ಕಳನ್ನು ಶಾಲಾ, ಕಾಲೇಜುಗಳು ಬಂದಾಗಿವೆ ಎಂದು ನಿರಂತರವಾಗಿ ಬಾಲಕಾರ್ಮಿಕರನ್ನಾಗಿ ಮಾಡಿವೆ, ಇದೊಂದು ರೀತಿಯಲ್ಲಿ ಮಕ್ಕಳನ್ನು ಸಮಾಜ ಪರೋಕ್ಷವಾಗಿ ಶೋಷಣೆಯನ್ನು ಮಾಡಿದಂತೆ ಆಗುತ್ತಿದೆ.

ಕಡು ಬಡತನದ ಕುಟುಂಬದ ಮಕ್ಕಳಿಗೆ ಸರ್ಕಾರ, ಸರ್ಕಾರೇತರ ಸಂಸ್ಥೆಗಳ ಶಾಲೆಗಳಲ್ಲಿ, ವಸತಿ ನಿಲಯಗಳಲ್ಲಿ ಕೊಡ ಮಾಡುವ ಪೌಷ್ಠಿಕ ಆಹಾರ, ಬಿಸಿ ಊಟದಂತ ಆಹಾರಗಳನ್ನು, ಅಂಗನವಾಡಿ ಆಹಾರಗಳು, ಕಾಲಕಾಲಕ್ಕೆ ನೀಡುವ ವಿದ್ಯಾರ್ಥಿವೇತನವನ್ನು, ಮಕ್ಕಳ ಶಾಲಾ ವಸ್ತ್ರಗಳು, ಸೈಕಲ್‌ಗಳು ಮುಂತಾದ ಸೌಕರ್ಯಗಳು ನಿಲುಗಡೆಗೊಂಡಿರುವುದರಿಂದ ಒಂದಿಷ್ಟು ಪಾಲಕರಿಗೆ ಆರ್ಥಿಕ ಹೊರೆಯನ್ನು ತಂದೊಡ್ಡಿದೆ ಎನ್ನಬಹುದು. ಇದರಾಚೆಗೂ ಕಡುಬಡತನದ ಕುಟುಂಬಗಳು ತಮ್ಮ ಮಕ್ಕಳನ್ನ ಸಾಕಿ ಸಲುವಲು ಸಾಲದ ಮೊರೆಹೋಗಿ, ತಂದಿರುವ ಸಾಲಕ್ಕೆ ಬಡ್ಡಿಕಟ್ಟಲು ಸಾಧ್ಯವಾಗದೆ ಆತ್ಮಹತ್ಯಯಂತಹ ಕೆಟ್ಟ ನಿರ್ಧಾರಕ್ಕೆ ಬಂದು ತಮ್ಮ ಅಮೂಲ್ಯವಾದ ಜೀವನವನ್ನು ಆಳು ಮಾಡಿಕೊಳ್ಳುತ್ತಿರುವುದು ದುಃಖಕರವಾದ ಸಂಗತಿ. ಇದಕ್ಕೆಲವು ಪರೋಕ್ಷವಾಗಿ ಶಾಲೆಗಳು ಆರಂಭಗೊಳ್ಳದೇ ಇರುವುದು ಒಂದು ಕಾರಣವಾದರೆ, ಮತ್ತೊಂದು ರೀತಿಯಲ್ಲಿ ಸರಳವಾದ ಶಿಕ್ಷಣಕ್ಕೆ ಅಡ್ಡಿಯನ್ನುಂಟು ಮಾಡಿದ ಕೋವಿಡ್-೧೯ ತನ್ನ ಅಟ್ಟಹಾಸವನ್ನು ಮುಂದುವರೆಸುತ್ತ ಶಿಕ್ಷಣವೆಂಬ ಬೃಹತ್ತಾಕರವಾದ ಗೋಡೆಯನ್ನೇ ಕಡೆವಿ ಹಾಕಿ ತನ್ನ ಭದ್ರಕೋಟೆಯನ್ನು ಕಟ್ಟಿಸಿಕೊಂಡಂತಾಗಿದೆ.

## ಶಿಕ್ಷಣ ಸಂಸ್ಥೆಗಳ ಮೇಲಿನ ಪ್ರಭಾವ

ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಜ್ಯ ಮತ್ತು ರಾಷ್ಟ್ರದ ನಡುವೆ ನಿಕಟ ಸಂಬಂಧವನ್ನಿರಿಸಿಕೊಂಡು ಒಂದಕ್ಕೊಂದು ಪೂರಕವಾಗಿ ಶಿಕ್ಷಣದ ವ್ಯವಸ್ಥೆಯನ್ನು ಇನ್ನಷ್ಟು ಅಭಿವೃದ್ಧಿ ಮಾಡಲು ನಿರತವಾಗಿವೆ. ಸಮಾಜದಲ್ಲಿ ಶಿಕ್ಷಣವನ್ನು ಉನ್ನತಮಟ್ಟಕ್ಕೆ ಕೊಂಡ್ಯೊಯಲು ರಾಜ್ಯ ಮತ್ತು ರಾಷ್ಟ್ರಗಳೊಂದೆ ಅಲ್ಲದೇ ಸರ್ಕಾರೇತರ ಸಂಘ-ಸಂಸ್ಥೆಗಳು ಹಗಲಿರಳು ಶ್ರಮಿಸುತ್ತಿವೆ. ಆದರೆ ಈ ಮರಾಮಾರಿ ಕೋರೋನ ವೈರಸ್ ಅವುಗಳೆಲ್ಲವನ್ನು ನಾಶಮಾಡಿ ಶಿಕ್ಷಣವನ್ನು ಸಮಸ್ಯೆಯಲ್ಲಿ ಇರುವಂತೆ ಮಾಡಿದೆ.

ಬಹುಮುಖ್ಯವಾಗಿ ಸರ್ಕಾರದ ಶಿಕ್ಷಣ ವ್ಯವಸ್ಥೆಯ ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳಿಗಿಂತ ಖಾಸಗಿ ಶಿಕ್ಷಣ ಸಂಸ್ಥೆಗಳು ಸಾಕಷ್ಟು ತೊಂದರೆಯಲ್ಲಿ ಸಿಕ್ಕಾಕಿಕೊಂಡಿವೆ. ಇವುಗಳಲ್ಲಿ ಕೆಲವೊಂದನ್ನು ಉಲ್ಲೇಖಿಸುವುದಾದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಥೆಯಲ್ಲಿ ಕಾರ್ಯನಿರತ ಸಿಬ್ಬಂದಿಗಳಿಗೆ ಸರಿಯಾಗಿ ಸಂಬಳವನ್ನು ನೀಡದೇ ಕೆಲಸದಿಂದ ತೆಗೆಯುವಂತಹ ಸಂದರ್ಭಕ್ಕೆ ಬಂದು ಅತೀ ಮುಖ್ಯವಾಗಿರುವ ಅದೇಷ್ಟೋ ಸಿಬ್ಬಂದಿಗಳನ್ನು ಅನಿವರ್ಯವಾಗಿ ಕೆಲಸದಿಂದ ತೆಗೆದು ಮನೆಗೆ ಕಳುಹಿಸಿವೆ. ಈ ಮೂಲಕವಾಗಿ ಗಮನಿಸಿದಾಗ ನಮಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಶೇಕಡ ೫೦ ಪ್ರತಿಶತದಂತೆ ಸಂಬಳವನ್ನು ಕೊಡುವುದಾಗಿ ಒಡಂಬಡಿಕೆಯನ್ನು ಮಾಡಿಕೊಂಡ ಒಂದಿಷ್ಟು ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ತರಗತಿಗಳನ್ನು ಆಯೋಜಿಸಿದರು ಸಿಬ್ಬಂದಿ ವರ್ಗ ಸರಿಯಾದ ಸಮಯಕ್ಕೆ ಸರಿಯಾದ ತರಗತಿಗಳನ್ನು ತೆಗೆದುಕೊಳ್ಳದೇ ಇರುವುದರಿಂದ ವಿದ್ಯಾರ್ಥಿಗಳೊಂದಿಗೆ ಆಟವಾಡುತ್ತಿದ್ದಾರೆ. ಇದನ್ನು ನಿಯಂತ್ರಿಸುವ ಕೆಲಸಕ್ಕೆ ಶಿಕ್ಷಣ ಸಂಸ್ಥೆಗಳು ಕೈ ಹಾಕಿದರು ಪೂರ್ಣ ಪ್ರಮಾಣದಲ್ಲಿ ನಿಯಂತ್ರಿಸಲು ಕಷ್ಟವಾಗುತ್ತಿದೆ. ಒಂದು ವೇಳೆ ಸರಿಯಾದ ಆನ್‌ಲೈನ್ ತರಗತಿಗಳು ತೆಗೆದುಕೊಳ್ಳದೇ ಇದ್ದ ಪಕ್ಷದಲ್ಲಿ ಸಂಸ್ಥೆಗಳಿಗೆ ವಿದ್ಯಾರ್ಥಿಗಳಿಂದ ಹಣ ಸಂದಾಯವಾಗುವುದಿಲ್ಲ ಇದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತಷ್ಟು ಆರ್ಥಿಕ ಅಡಚಣೆಯಿಂದ ದೀವಾಳಿಯಾಗುತ್ತವೆ. ಯಾವಾಗ ವಿದ್ಯಾರ್ಥಿಗಳಿಂದ ಹಣ ಸಂದಾಯವಾಗುವುದಿಲ್ಲವೂ ಅಲ್ಲಿಯ ವರೆಗೆ ಸಂಸ್ಥೆಯ ಕಟ್ಟಡದ ಬಾಡಿಗೆ, ಕಛೇರಿಯ ಖರ್ಚು ವೆಚ್ಚವನ್ನು ಭರಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಸಂಸ್ಥೆ ಮತ್ತಷ್ಟು ಕುಬ್ಜಗೊಳ್ಳುತ್ತದೆ. ಈ ಮೂಲಕ ಮತ್ತೊಂದು ಸಮಸ್ಯೆಯನ್ನು ಸಂಸ್ಥೆಗಳು ಎದರಿಸುತ್ತಿವೆ, ಅವೆಲ್ಲವು ಕೋವಿಡ್-೧೯ರಿಂದ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳು ಮುಚ್ಚಲ್ಪಟ್ಟಿರುವುದರಿಂದ ಶಿಕ್ಷಕರು, ಸಿಬ್ಬಂದಿಗಳು, ಆಡಳಿತ ಮಂಡಳಿಗಳು, ವಿದ್ಯಾರ್ಥಿಗಳು ಸಾಕಷ್ಟು ಮಾನಸಿಕವಾಗಿ ಕುಗ್ಗಿ ಅನಾರೋಗಕ್ಕೆ ತುತ್ತಾಗಿರುವುದು ಕಂಡುಬರುತ್ತದೆ. ಜೊತೆಯಲ್ಲಿ ಶಿಕ್ಷಣ ಸಂಸ್ಥೆಗಳು ಅನುಭವಿಸುತ್ತಿರುವ ನೋವುಗಳನ್ನು ನೋಡಿದಾಗ ಶಿಕ್ಷಣಕ್ಕೆ ಅಷ್ಟೋಂದು ಪ್ರಮಾಣದಲ್ಲಿ ಮಹತ್ವವಿರುವುದು ತಿಳಿದುಬರುತ್ತದೆ.

ಇನ್ನೂ ಈ ಸಂಸ್ಥೆಗಳು ಅದೇಷ್ಟೋ ತಮ್ಮ ಸಿಬ್ಬಂದಿಗಳನ್ನು ಕೆಲಸದಿಂದ ತೆಗೆದಿರುವುದರಿಂದ ನಿರುದ್ಯೋಗ ಸಮಸ್ಯೆಯುಂಟಾಗಿ ಅವರ ಕುಟುಂಬಗಳು ಬೀದಿಗೆ ಬಂದಿವೆ. ಇವುಗಳಲ್ಲಿ ಅದೇಷ್ಟೋ ಶಿಕ್ಷಕರು ಅಹಿತಕರವಾದ ಕೆಲಸದಲ್ಲಿ ತೊಡಗಿ ಮೋಸದಾಟಗಳಲ್ಲಿ ಭಾಗಿಯಾಗಿ ಸಮಾಜಕ್ಕೆ ಕಂಟಕವಾಗಿದ್ದಾರೆ. ಅವರು ಅಪರಾಧಿಯಂತಹ ಕೃತ್ಯಗಳಲ್ಲಿಯೂ ತೊಡಗಿದ್ದಾರೆ. ಕೆಲವರು ದುಶ್ಚಟಕ್ಕೆ ಬಲಿಯಾಗಿದ್ದಾರೆ. ಅಲ್ಲದೇ ತಮ್ಮ ತಮ್ಮ ಕುಟುಂಬಗಳಲ್ಲಿ ಅಶಾಂತಿಯನ್ನುಂಟು ಮಾಡಿ ಕುಟುಂಬದ ವಿಘಟನೆಗೆ ಕಾರಣೀಕರ್ತರಾಗಿದ್ದಾರೆ. ಅದೇಷ್ಟೋ ಖಾಸಗಿ ಶಿಕ್ಷಣದ ಸಿಬ್ಬಂದಿಗಳು ಕುಟುಂಬ ನಿರ್ವಹಿಸಲು ಸಾಧ್ಯವಾಗದೇ ತಮ್ಮ ಜೀವನಶೈಲಿಯನ್ನು ಬದಲಾಯಿಸಿಕೊಂಡಿದ್ದಾರೆ. ಕೆಲವರು ಅತೀ ಹೀನಾಯವಾಗಿರುವ ಜೀವನವನ್ನು ನಡೆಸಿದರೆ, ಇನ್ನೂ ಕೆಲವರು ಅತ್ಯಂತ ಕಳಪೆಯಾಗಿರುವ ಜೀವನಶೈಲಿಯನ್ನು ಮೈಗೂಡಿಸಿಕೊಂಡಿದ್ದಾರೆ, ಇನ್ನೂ ತೀರ ಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದಾರೆ ಇವರು ಸರಿಯಾದ ಸಮಯಕ್ಕೆ ಸರಿಯಾದ ಊಟವಿಲ್ಲದೇ, ಪೌಷ್ಟಿಕ ಆಹಾರವಿಲ್ಲದೇ, ಕೆಲವೊಮ್ಮೆ ಉಪವಾಸವನ್ನು ಮಾಡುವುದರ ಮೂಲಕ ನಿತ್ಯ ಕಾಲಹರಣ ಮಾಡಿದರೆ ಸರಿಯಾಗಿ ಮೂರೊತ್ತು ಊಟವನ್ನು ಸಹ ಮಾಡಲು ಅಶಕ್ತರಾಗಿದ್ದರೆ. ಆದರೆ ಇದ್ಯಾವುದನ್ನು ಸಂಸ್ಥೆಗಳು, ಸರ್ಕಾರಗಳು ಗಮನಹರಿಸುವುದಿಲ್ಲದಿರುವುದು ಸಮಾಜದಲ್ಲಿ ಕೆಟ್ಟ ಬೆಳವಣಿಗೆಯಾಗಿದೆ. ಜೊತೆಗೆ ಅವಶ್ಯವಾಗಿ ಬೇಕಿರುವ ಸಿಬ್ಬಂದಿಗಳನ್ನು ನಿಯಂತ್ರಿಸುವಲ್ಲಿ ವಿಫಲಗೊಂಡಿವೆ, ಜೊತೆಯಲ್ಲಿ ಅಧಿಕವಾಗಿ ನಷ್ಟವನ್ನು ಅನುಭವಿಸುತ್ತಿವೆ.

ಈಗಾಗಲೇ ಇರುವ ಖಾಸಗಿ ಮತ್ತು ಸರ್ಕಾರದ ಶಿಕ್ಷಣ ಕೇಂದ್ರಗಳು ತಮ್ಮ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ನಿಲ್ಲಿಸಿರುವುದರಿಂದ ಸಮಾಜಕ್ಕೆ ಸಿಗಬೇಕಾದ ಮಾರ್ಗದರ್ಶನ, ಸಲಹೆಗಳು, ವಿಚಾರಗಳು, ವಿವಿಧ ಜ್ಞಾನಶಾಖೆಗಳು ಸಹಜವಾಗಿ ನಿಲ್ಲುತ್ತವೆ. ಇದರಿಂದ ಪರೋಕ್ಷವಾಗಿ ಸಮಾಜದ ಮೇಲೆ ಪರಿಣಾಮ ಬೀರುತ್ತಿದೆ.

## ಸಮಾಜದ ಮೇಲಿನ ಪ್ರಭಾವ

ಸಮಾಜದಲ್ಲಿ ಕಡು ಬಡತನದಿಂದ ಕೂಡಿರುವ ಅದೇಷ್ಟೋ ಕುಟುಂಬಗಳು ತಮ್ಮ ಜೀವನ ನಿರ್ವಹಣೆಗಾಗಿ ಒಂದೂರಿಂದ ಇನ್ನೊಂದು ಊರಿಗೆ ಕೆಲಸ ಹುಡಿಕಿಕೊಂಡು ಹೋಗುವುದು ಸಹಜ. ಇಂಥವರಿಗೆ ಈ ಕೋವಿಡ್-೧೯ ಅವರ ಬದುಕನ್ನೇ ನಾಶಮಾಡಲು ಹೋರಟಿದೆ. ಒಂದು ಕಡೆ ಅವರ ದೇಹದ ಮೇಲೆ ಸವಾರಿ ಮಾಡಿದರೇ, ಇನ್ನೊಂದು ಕಡೆ ಅವರ ಬದುಕಿನ ಮೇಲೆ ಸವಾರಿ ಮಾಡಿ ಆರ್ಥಿಕವಾಗಿ ಕುಗ್ಗುವಂಥೆ ಮಾಡಿದೆ.

ಮಕ್ಕಳನ್ನು ಲಾಲನೆ-ಪಾಲನೆ ಮಾಡಿಕೊಂಡು ಸುಖಃವಾಗಿ ತಮ್ಮ ಮನೆಯಲ್ಲಿಯೇ ಇರುವ ಅದೇಷ್ಟೋ ಜನರಿಗೆ ಕೋವಿಡ್-೧೯ ವೈರಾಣು ಸಾಕಷ್ಟು ತೊಂದರೆಯನ್ನು ನೀಡಿದೆ. ನಿರುದ್ಯೋಗಕ್ಕೆ ಸಂಬಂಧಿಸಿದಂತೆ ಮಾತನಾಡುವುದಾದರೆ,

ಅವಾಗಲೇ ಸಾಕಷ್ಟು ವಿದ್ಯಾವಂತರು, ಅವಿದ್ಯಾವಂತರು ಕೆಲಸಕ್ಕಾಗಿ ಪರದಾಡುವ ಸಮಯದಲ್ಲಿರುವಾಗಲೇ ಮತ್ತೊಂದು ಕಡೆಯಲ್ಲಿ ಈ ಕೋವಿಡ್-೧೯ ಮತ್ತಷ್ಟು ಅಧಿಕವಾದ ನಿರುದ್ಯೋಗವನ್ನು ಸೃಷ್ಟಿ ಮಾಡಿತು. ಇದು ಕುಟುಂಬದ ಬಡತನಕ್ಕೆ ಕಾರಣವಾಯಿತು. ಮಹಿಳೆಯರಿಗೆ, ಬೀದಿ ವ್ಯಾಪಾರಿಗಳಿಗೆ ತುಂಬಲಾರದಂಥ ಆರ್ಥಿಕಮಟ್ಟ ಕುಂಠಿತವಾಯಿತು. ಸಹಜ ಜೀವನಕ್ಕೆ ಅಡೆತಡೆ ಮಾಡಿತು. ಇದರಿಂದ ಸಾಮಾನ್ಯವಾಗಿ ಸಾಲದ ಬಾಧೆಯಿಂದ ಆತ್ಮಹತ್ಯೆಕ್ಕೆ ದಾರಿ ಮಾಡಿತು. ಇವರಿಗೆ ಬೆನ್ನೆಲುಬಾಗಿ ನಿಂತ ಅದೆಷ್ಟೋ ಕೈಗಾರಿಕೆಗಳು ಕುಸಿದವು. ಇದರಿಂದ ಉದ್ಯೋಗಿಗಳು ತಮ್ಮ ಕೆಲಸ ಕಳೆದುಕೊಂಡರು. ಯಾವುದಾದರು ಕೆಲಸ ಸಿಕ್ಕದರೆ ಸಾಕು ಎನ್ನುವ ಅನಿವಾರ್ಯ ಪರಿಸ್ಥಿತಿಗೆ ಯುವಜನತೆ ಪರಿತಪಸಿದರು. ಇದರಿಂದ ಕೆಲ ಯುವ ಜನರು ತಮಗೆ ಕೆಲಸ ಸಿಕ್ಕಿದ್ದನ್ನು ಮಾಡಿಕೊಂಡು ಜೀವನ ನಡೆಸಿಕೊಂಡು ಹೋದರು. ಆದರೆ ಯಾವುದು ಯಶಸ್ಸು ಕಾಣಲಿಲ್ಲ.

ಕೋವಿಡ್ ೧೯ ನಿಂದ ಬಂದಾಗಿರುವ ಸಾಮಾಜಿಕ ಬದುಕು ಜನರ ಮೇಲೆ ಸಾಕಷ್ಟು ಪರಿಣಾಮ ಬೀರಿದೆ. ನಿರುದ್ಯೋಗಿಗಳು ಯಾವುದೇ ಕೆಲಸ ಕಾರ್ಯವಿಲ್ಲದವರು ಇದರಿಂದ ಮಧ್ಯಪಾನ, ಇಸ್ಪೀಟು ಇತ್ಯಾಧಿ ದುಶ್ಚಟಗಳಿಗೆ ಸಿಕ್ಕರೆ, ಯುವಕರು, ಮಕ್ಕಳು ಆನ್‌ಲೈನ್ ಮೂಲಕ ಪಾಠವನ್ನು ಕೇಳವುದರ ಮೂಲಕ ಅವರಿಗೆ ಸ್ವಲ್ಪ ದಿನಗಳಲ್ಲಿಯೇ ಕಣ್ಣಿನ ಸಮಸ್ಯೆ, ಇತರ ಆರೋಗ್ಯದ ಸಮಸ್ಯೆಗೆ ಸಿಲುಕಿದರು. ಸಹಜವಾಗಿ ಮಕ್ಕಳು ಮೊಬೈಲ್ ಗೇಮ್ ಆಟವಾಡುವುದು ಅಧಿಕವಾಗಿದ್ದರಿಂದ, ಟಿ.ವ್ಹಿ ನೋಡುವುದರಿಂದ, ಕೆಲವರು ಅಶ್ಲೀಲ ಚಿತ್ರ ನೋಡುವುದರಿಂದ ಓದುವಲ್ಲಿ ಆಸಕ್ತಿ ಕಡಿಮೆ ಮಾಡಿಕೊಳ್ಳುವಂತಾಗಿದೆ.[3] (ಯುವ ಆಂದೋಲನ 2021).

ಆರೋಗ್ಯಕ್ಕೆ ಸಂಬಂಧಿಸಿದಂತೆ ಮಾನವನಿಗೆ ಅತಿಮುಖ್ಯವಾದದ್ದು ಆರೋಗ್ಯ. ಆರೋಗ್ಯವೇ ಭಾಗ್ಯ ಎನ್ನುವ ಗಾದೆನೇ ಇದರ ಮಹತ್ವವನ್ನು ಹೇಳುತ್ತದೆ. ಮಾನವ ಯಾವಾಗಲೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಮನಾಗಿ ಇದ್ದರೆ ಮನುಷ್ಯ ಇನ್ನೇನ್ನು ಬೇಕಾದರೂ ಸಾಧಿಸಬಹುದು. ಆದರೆ ಈ ಮಹಾಮಾರಿ ಕೋವಿಡ್-೧೯ನಿಂದ ಆರೋಗ್ಯವಂತಹ ವೃದ್ದರು, ಮಕ್ಕಳು, ಪುರುಷರು, ಮಹಿಳೆಯರು ಎನ್ನದೇ ಎಲ್ಲರ ಮೇಲೆ ಆಕ್ರಮಿಸಿ ಅವರ ಪ್ರಾಣಾವನ್ನು ಕಿತ್ತುಕೊಂಡಿದೆ. ಇನ್ನೂ ಅರೆ ಆರೋಗ್ಯದಿಂದ ಬಳಲುತ್ತಿರುವ ತಲೆನೋವು, ಸಕ್ಕರೆ ಕಾಯಿಲೆ, ಬಿ.ಪಿ. ಮುಂತಾದವರು ತಮ್ಮ ಆರೋಗ್ಯದ ಬಗ್ಗೆ ಎಷ್ಟೋ ಕಾಳಜೀವಹಿಸುತ್ತಿದ್ದರು ಈ ವೈರಾಣು ಯಾರನ್ನು ಬಿಡದೇ ಹರಡುಕೊಂಡಿದೆ. ಇನ್ನೂ ಒಂದಿಷ್ಟು ಪ್ರಮಾಣದಲ್ಲಿ ಲಸಿಕೆ ರೂಪದಲ್ಲಿ ಔಷಧಿ ದೇಶಕ್ಕೆ ಬಂದರು ಆ ವೈರಾಣು ಹೋಗುತ್ತಿಲ್ಲ.

ಶಿಕ್ಷಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ, ಕೊವೀಡ್-೧೯ ನಿಂದ ಶಾಲೆ ಕಾಲೇಜುಗಳು ಬಂದ್ ಆದವು. ಇದರಿಂದ ರಾಜ್ಯದ ಸರ್ಕಾರಿ ಅತಿಥಿ ಉಪನ್ಯಾಸಕರು, ಖಾಸಗಿ ಉಪನ್ಯಾಸಕರು ಹಾಗೂ ಶಿಕ್ಷಕರು, ಶಿಕ್ಷಕಿಯರಿಗೂ ತಮ್ಮ ಜೀವನ ನಡೆಸುಕೊಳ್ಳುವುದಕ್ಕೆ ವೇತನವಿಲ್ಲದೆ ಸಾಕಷ್ಟು ಆರ್ಥಿಕ ಸಮಸ್ಯೆಗೆ ಒಳಗಾಗಿದ್ದರೆ. ಆರ್ಥಿಕ ಮುಗಟ್ಟಿನಿಂದ ಆತ್ಮಹತ್ಯೆ ಮಾಡಿಕೊಂಡರು ಮತ್ತು ಕೋವಿಡ ನಿಂದ ಜೀವನಕ್ಕೆ ತುತ್ತಾದವರು ಅದೆಷ್ಟೋ ಜನರಿದ್ದಾರೆ. ಇನ್ನೂ ಎಷ್ಟೋ ತಳ್ಳುವ ಗಾಡಿಯಲ್ಲಿ ಹಣ್ಣು ಹಂಪಲು ತರಕಾರಿ ಮಾರುತ್ತ ಜೀವನ ಸಾಗಿಸುತ್ತಿದ್ದವರು ಹಾಗೂ ಉದ್ಯೋಗ ಖಾತ್ರಿ–ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿದ್ದವರು. ಸಂಸಾರದ ಆರ್ಥಿಕ ಹೊರೆಯ ಜೊತೆಯಲ್ಲಿ ಮಾನಸಿಕವಾಗಿ ಒತ್ತಡವೂ ಅವರನ್ನು ತ್ರೀವವಾಗಿ ಅವರಲ್ಲಿ ಜನ ಖಿನ್ನತೆಗೆ ಒಳಗಾಗುವಂತೆ ಮಾಡಿದೆ.

ಕಲಿಕೆಯಲ್ಲಿ ಹಿಂದುಳಿಯುವಿಕೆ ಸಂಬಂಧಿಸಿದಂತೆ ಸಮಾಜದಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ಶಿಕ್ಷಣ ಅತಿಮುಖ್ಯ, ಶಿಕ್ಷಣವಿಲ್ಲದೆ ಜ್ಞಾನವಿಲ್ಲ. ಅನಕ್ಷರತೆ ಮತ್ತು ಅಕ್ಷಸ್ಥರು ನಡುವೆ ಸಾಕಷ್ಟು ವ್ಯತ್ಯಾಸ ಕಾಣುತ್ತೇವೆ. ಒಂದು ಕುಟುಂಬದಲ್ಲಿ ಎಲ್ಲರೂ ಶಿಕ್ಷಣ ಪಡೆದರೆ ಜ್ಞಾನ ತಿಳುವಳಿಕೆ ಪಡೆದಂತೆ ಅದೇನಿದ್ದರು ಶಿಕ್ಷಣದ ಪಡೆದ ಕುಟುಂಬದ ಲಕ್ಷಣವೇ ಬೇರೆ ಎನ್ನಿಸುತ್ತದೆ. ಆದರೆ ಕೋವಿಡ್‌ನಿಂದ ಮಕ್ಕಳ ಮೇಲೆ, ಯುವಕರ ಮೇಲೆ ಕಲಿಕೆಯಲ್ಲಿ ವ್ಯಾತ್ಯಾಸ ಬಂದು ಅವರ ಕಲಿಕೆ ಹಿಂದುಳಿಯುವಿಕೆ ಕಾರಣವಾಯಿತು. ಮಕ್ಕಳು ಮನೆಯಲ್ಲಿಯೇ ಇರಬೇಕಾಯಿತು. ಆಟವಾಡುವುದು ಸೇರಿದಂತೆ ದೈಹಿಕ ಚಟುವಟಿಕೆಗಳು ಇವರಿಗೆ ಇಲ್ಲದಾಯಿತು. ಇದರಿಂದ ಮಕ್ಕಳು ಆಶಿಸ್ತುನಿಂದ ವರ್ತಿಸುವಂತಾಯಿತು. ಹಾಗೆಯೇ ಪೋಷಕರು, ವಿಶೇಷವಾಗಿ ಹೆಣ್ಣು ಮಕ್ಕಳನ್ನು ಹೊಲ ಗದ್ದೆ ಕೆಲಸಕ್ಕೆ ಕರೆದುಕೊಂಡು ಹೋಗುವಂಥೆ ಬಾಲಕಾರ್ಮಿಕರನ್ನಾಗಿ ಮಾಡಿತು.

ಖಾಸಗಿ ಶಿಕ್ಷಣದ ಸಂಸ್ಥೆಯಿಂದ ಪಾಲಕರ ಮೇಲೆ ಒತ್ತಡ ಹೇರಿರುವುದಕ್ಕೆ ಸಂಬಂಧಿಸಿದಂತೆ ಮಾತನಾಡುವುದಾದರೆ, ಸರ್ಕಾರೇತರ-ಸಂಘ ಸಂಸ್ಥೆಗಳಲ್ಲಿ ಈ ಸಮ್ಯಸೆಯನ್ನು ಕಾಣುತ್ತವೆ. ಹೆಚ್ಚು ಪೋಷಕರು ಆರ್ಥಿಕದಲ್ಲಿ ತೊಂದರೆಯನ್ನು ಅನುಭವಿಸುವುದರ ಜೊತೆಗೆ ಮಕ್ಕಳ ಶಾಲೆ ಫೀಸ್ ಕೊಡುವುದಕ್ಕೆ ಕಷ್ಟಕರವಾಗಿದೆ. ಮಕ್ಕಳನ್ನು ಆನ್‌ಲೈನ್ ಶಾಲೆಗೆ ಬಿಡುಸುವಂತಾಗಿದೆ. ಅದಾಗಿಯ್ಯು ಪೋಷಕರು ಮಕ್ಕಳನ್ನು ಶಾಲೆಗೆ ಕಳಿಸುವುದು ನಡೆದಿದೆ. ಇದರ ಮೂಲಕ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಫೀಸ್ ಕೊಡಿ ಎಂದು ಪಾಲಕರ ಮೇಲೆ ಒತ್ತಡ ಹೇರುವುದು, ಪೋಷಕರು ಮಕ್ಕಳ ಫೀಸ್ ಕಟ್ಟಿಲ್ಲಾ ಅಂದರೆ ಮಕ್ಕಳನ್ನು ತರಗತಿಯಿಂದ ರದ್ದುಗೊಳಿಸುವುದು ಮಾಡುತ್ತಿರುವುದರಿಂದ ಮಕ್ಕಳು ಮಾನಸಿಕವಾಗಿ ದುರ್ಬಲಗೊಳ್ಳುತ್ತಿದ್ದಾರೆ ಎಂಬ ಮಾಹಿತಿಗಳನ್ನು ವಾರ್ತೆಗಳಲ್ಲಿ, ದಿನಪತ್ರಿಕೆಯಲ್ಲಿ ನೋಡುವುದಾಗಿದೆ. ಪೋಷಕರು ಶಾಲೆ ಫೀಸ್ ಸಲ್ಪಮಟ್ಟಿಗೆ ಕಟ್ಟಿದರು ಖಾಸಗಿ ಸಂಸ್ಥೆಯವರಿಗೆ ಸಮಾಧಾನವಿರುವುದಿಲ್ಲ ಮಕ್ಕಳ ಪಠ್ಯ ಪುಸ್ತಕಗಳನ್ನು ಕೊಡಲು ಹಿಂಜರಿಯುವವರು ಇದರಿಂದ ಮಕ್ಕಳ ಮೇಲೆ ಓದಲು ಆಸಕ್ತಿ ಕಡಿಮೆ ಆಗುತ್ತಿದೆ. ಈ ರೀತಿಯಾಗಿ ಕೋವಿಡ್ ನಿಂದ ಎಲ್ಲಾ ರೀತಿಯ ಸಮಸ್ಯೆಗಳು ಕಾಣುತ್ತಿವೆ.

ಜಗತ್ತಿನಲ್ಲಿ ಆಗುತ್ತಿರುವ ಬಾಲ್ಯವಿವಾಹ ಪೈಕಿ ಶೇಕಡ ೫೦ರಷ್ಟು ಭಾರತ ಸೇರಿದಂತೆ ಐದು ದೇಶಗಳಲ್ಲಿ ನಡೆಯುತ್ತಿವೆ.[4](ಯುನಿಸೆಫ್ 2021) ಎಂದು ಯುನಿಸೆಫ್ ವರದಿಯೊಂದು ಹೇಳಿದೆ. ಭಾರತ, ಬ್ರೆಜಿಲ್, ಇಥಿಯೋಪಿಯಾ, ಬಾಂಗ್ಲಾದೇಶ ಮತ್ತು ನೈಜಿರಿಯಾ ದೇಶಗಳಲ್ಲಿ ಬಾಲ್ಯವಿವಾಹಗಳು ಅತ್ಯಧಿಕ ಪ್ರಮಾಣದಲ್ಲಿ ಆಗುತ್ತಿವೆ ಎಂದು ವರದಿ

ತೋರಿಸಿದೆ. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಕೋವಿಡ್ ೧೯ ಬಾಲ್ಯ ವಿವಾಹ ವಿರುದ್ಧದ ಹೋರಾಟದ ಪ್ರಗತಿಗೆ ಅಪಾಯ ಎಂಬ ವಿಶ್ಲೇಷಣಾತ್ಮಕ ವರದಿಯನ್ನು ಪ್ರಕಟಿಸಿರುವ ಯುನಿಸೆಫ್, ಕೋವಿಡ್ ಸಂಕಷ್ಟ ಕಾಲದಲ್ಲಿ ಬಾಲ್ಯವಿವಾಹಗಳು ಸಂಖ್ಯೆ ಇನಷ್ಟು ಏರಿದಂತಿದೆ ಎಂದು ಕಳವಳ ವ್ಯಕ್ತಪಡಿಸಿದೆ.[5](ಪ್ರಜಾವಾಣಿ ದಿನಪತ್ರಿಕೆ 2021) ಈ ರೀತಿಯಲ್ಲಿ ಪರೋಕ್ಷವಾಗಿ ಅನೇಕ ಸಮಾಜಿಕ ಸಮಸ್ಯೆಗಳಿಗೆ ಈ ಕೋವಿಡ್-೧೯ ಮಹಾಮಾರಿ ವೈರಸ್ ಕಾರಣವಾಗುತ್ತಿರುವುದು ದುರಂತ.

## ಪರ್ಯಾಯ ಮಾರ್ಗಗಳು

- ಕೋವಿಡ್ ಮಾರ್ಗಸೂಚಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ, ಲಸಿಕೆ ನೀಡುವಿಕೆಯನ್ನು ತೀವ್ರಗೊಳಿಸಿದರೆ ಮೊದಲ ಎರಡು ಅಲೆಗಳಿಗಿಂತ ಕಡಿಮೆ ಪ್ರಮಾಣದ ಪರಿಣಾಮ ಬೀರಬಹುದು ಎನ್ನುವ ವೈದ್ಯರು ಸಲಹೆಯನ್ನು ಚಾಚೂ ತಪ್ಪದೇ ಸರ್ಕಾರಗಳು ಪಾಲಿಸಬೇಕು ಮತ್ತು ಜನರನ್ನು ಪಾಲ್ಗೊಳ್ಳುವಂತೆ ಕ್ರಮ ಜರಗಿಸಬೇಕು.
- ಭಾರತದಲ್ಲಿ ಇನ್ನೂ 40 ಕೋಟಿಗೂ ಅಧಿಕ ಮಂದಿ ಕೋವಿಡ್ ಲಸಿಕೆ ಪಡೆಯಲು ಬಾಕಿ ಇದೆ ಎಂಬುದು ತಿಳಿದು ಬಂದಿದೆ. ಕೂಡಲೇ ಮೂರನೇ ಅಲೆ ಹರಡುವ ಮುನ್ನವೇ ಕಡ್ಡಾಯವಾಗಿ ಎಲ್ಲಾರೂ ಲಸಿಕೆ ಪಡೆಯುವಂತೆ ಮತ್ತು ಮಕ್ಕಳಿಗೆ ಶೀಘ್ರವಾಗಿ ಸಂಶೋಧನೆ ಮಾಡಿರುವ ಮತ್ತು ಮಾಡಲ್ಪಟ್ಟಿರುವ ಲಸಿಕೆಗಳನ್ನು ಉಚಿತವಾಗಿ ಒದಗಿಸಿಕೊಡಲು ಕ್ರಮಕೈಗೊಳ್ಳಬೇಕು.
- ಸರ್ಕಾರಗಳು ಶಾಲಾ ಕಾಲೇಜುಗಳನ್ನು ಕೋವಿಡ್-19ರ ಸಲುವಾಗಿ ಮುಚ್ಚಬಾರದು ಪರ್ಯಾಯವಾಗಿ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಮತ್ತು ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳು ಸಹಾಯೋಗದೊಂದಿಗೆ ವಿಶೇಷ ಕಾಳಜೀವಹಿಸಿ ಶಿಕ್ಷಣವನ್ನು ಮುಂದುವರೆಸುತ್ತಿರಬೇಕು. ಯಾವುದೇ ಕಾರಣಕ್ಕೆ ಕಲಿಕೆಯನ್ನು ಸರ್ಕಾರಗಳು ನಿಲ್ಲಿಸಬಾರದು.
- ಕೋವಿಡ್-19ರ ಹಿನ್ನಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳು ಕೂಡಲೇ ಸ್ಥಗಿತಿಗೊಳ್ಳಬೇಕು ಎಂದು ಸರ್ಕಾರಗಳು ಆದೇಶ ಮಾಡಿದಾಗ ಶಿಕ್ಷಣ ಸಂಸ್ಥೆಗಳು ಮುಚ್ಚಲ್ಪಟ್ಟವು. ಮುಚ್ಚಲ್ಪಟ್ಟಿರುವ ಕೆಲವು ಶಿಕ್ಷಣ ಸಂಸ್ಥೆಗಳು ಸ್ವಂತ ಕಟ್ಟಡವಿಲ್ಲದೇ ಬಾಡಿಗೆ ಮೂಲಕವಾಗಿ ಶಿಕ್ಷಣವನ್ನು ಆರಂಭಿಸಿದ್ದರಿಂದ ಆರ್ಥಿಕವಾಗಿ ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದುದ್ದಲ್ಲದೇ ಬಾಡಿಗೆಯನ್ನು ನೀಡಲು ಪರದಾಡಿದವು ಮತ್ತು ಕೆಲವು ಸಂಸ್ಥಾಪಕರು ಆತ್ಮಹತ್ಯೆಗಳನ್ನು ಮಾಡಿಕೊಂಡರು. ಇಂಥ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರಗಳು ಬಾಡಿಗೆ ಮತ್ತು ಸಿಬ್ಬಂದಿ ವರ್ಗಗಳಿಗೆ ವೇತನವನ್ನು ನೀಡಲು ವಿಶೇಷ ಪ್ಯಾಕೇಜು ಅಡಿಯಲ್ಲಿ ಕ್ರಮಕೈಗೊಳ್ಳಬೇಕು.
- ಸರ್ಕಾರದ ಆದೇಶದ ಪ್ರಕಾರವಾಗಿ ಶಾಲಾ-ಕಾಲೇಜುಗಳು ಅನಿವಾರ್ಯವಾಗಿ ಆನ್ಲೈನ್ ತರಗತಿಗಳನ್ನು ಆರಂಭಿಸಲೇಬೇಕಾದ ಪರಿಸ್ಥಿತಿಗಳಲ್ಲಿ ಸರ್ಕಾರ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಆಂಡ್ರಾಡ್ ಫೋನ್ ಇದೆಯೇ, ಇಲ್ಲವೋ ಎಂದು ಸರ್ವೇ ಮಾಡಿಸಿ ಖಚಿತಪಡಿಸಿಕೊಳ್ಳಬೇಕು, ಯಾವ ವಿದ್ಯಾರ್ಥಿಗೆ ಇಲ್ಲವೋ ಅಂಥ ವಿದ್ಯಾರ್ಥಿಗೆ ಸರ್ಕಾರವೇ ವಿಶೇಷ ಪ್ಯಾಕೇಜ್ ಅಡಿಯಲ್ಲಿ ಉಚಿತವಾಗಿ ಫೋನ್ ಒದಗಿಸುವ ಮೂಲಕ ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕು.
- ಸರ್ಕಾರ, ವಾರ್ತಾ ಮತ್ತು ಪ್ರಸಾರ ಇಲಾಖೆಯ ಸಹಾಯೋಗದೊಂದಿಗೆ ಪ್ರತಿಯೊಂದು ದೃಶ್ಯ ಮಾದ್ಯಮಗಳಿಗೆ ಮತ್ತು ಶಿಕ್ಷಣ ಇಲಾಖೆಯ ನುರಿತ ಶಿಕ್ಷಕರಿಂದ ಸಿದ್ಧಪಡಿಸಿದ ಪಠ್ಯಾಧಾರಿತ ಬೋಧನೆಗಳನ್ನು ಕಡ್ಡಾಯವಾಗಿ ನಿಗದಿತ ಸಮಯದಲ್ಲಿ ನಿರಂತರವಾಗಿ ಪ್ರಸಾರ ಮಾಡುವಂತೆ ಕ್ರಮಕೈಗೊಳ್ಳಬೇಕು. ಪಾಲಕರು ಚಾಚೂ ತಪ್ಪದೇ ತಮ್ಮ ಮಕ್ಕಳನ್ನು ತರಗತಿಗಳಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು.
- ಎಂಥದ್ದೇ ಪರಿಸ್ಥಿತಿ ಬರಲಿ ಶೈಕ್ಷಣಿಕ ಚಟುವಟಿಕೆಗಳನ್ನು ನಿಲ್ಲಿಸಬಾರದು ಮತ್ತು ಸರ್ಕಾರಗಳು ವಿದ್ಯಾರ್ಥಿಗಳಿಗೆ, ಪಾಲಕರಿಗೆ ಮತ್ತು ಸಮಾಜಕ್ಕೆ ಶಿಕ್ಷಣದ ಮಹತ್ವವನ್ನು ತಿಳಿಸುವ ಮತ್ತು ಪ್ರಚಾರ ಪಡಿಸುವ ವಿಶೇಷ ಯೋಜನೆಗಳನ್ನು ರೂಪಿಸಬೇಕು ಮತ್ತು ಸರ್ಕಾರ ಯಾವುದೇ ಕಾರಣಕ್ಕೆ ಯಾವೊಬ್ಬ ಮಗುವು ಶಿಕ್ಷಣದಿಂದ ಹೊರಗುಳಿಯಲಾರದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು.

## ಕೊನೆಯ ಮಾತು

ಕಾಲಕಾಲಕ್ಕೆ ಸರ್ಕಾರಗಳು, ಆರೋಗ್ಯ ಸಂಸ್ಥೆಗಳು, ವೈದ್ಯರು ನೀಡುವ ಮಾರ್ಗದರ್ಶನಗಳನ್ನು, ಮಾರ್ಗೋಪಾಯಗಳನ್ನು ಚಾಚೂ ತಪ್ಪದೇ ಪಾಲಿಸಬೇಕಾದದ್ದು ಒಂದೇ ಮಾರ್ಗವಿದೆ. ಅಷ್ಟಾದರೂ ಹೆಚ್ಚಾಗಿ ನಾವು ಸ್ವಚತೆಯನ್ನು ಕಾಪಾಡುವುದು. ಮಾಸ್ಕ ಹಾಕುವುದು, ಧೈಹಿಕ ಅಂತರ ಕಾಪಾಡುವುದು. ಸ್ಯಾನಿಟೈಸರ್ ಬಳಸುವುದು ಸೂಕ್ತ. ಜೊತೆಯಲ್ಲಿ ಕೋವಿಡ್-೧೯ ನಿಂದ ಯಾವತ್ತಿಗೂ ದೈಹಿಕ, ಮಾನಸಿಕ ಆರೋಗ್ಯವಾಗಿ ಸಕರಾತ್ಮಕವಾಗಿ ಇದ್ದರೆ ಕೋವಿಡ್ ನಿಯಂತ್ರಣ ಮಾಡುವುದು ಸಾಧ್ಯ.

## ಕೊನೆ ಟಿಪ್ಪಣಿ

1. ಪ್ರಜಾವಾಣಿ ದಿನ ಪತ್ರಿಕೆ, ಪು.ಸಂ-2, ದಿನಾಂಕ:೧೩-೫-೨೦೨೧
2. ಕಂಬಾರ ಸಿ.ಆರ್ ಶೆಟ್ಟಿಕೇರಾ, 2019, ಸಾಮಾಜಿಕ ಬಿಕ್ಕಟ್ಟುಗಳು, ಗಾಯತ್ರಿ ಪ್ರಕಾಶನ, ಬಳ್ಳಾರಿ. ಪು.ಸಂ.-೨೮
3. ಯುವ ಆಂದೋಲನ ವಿಶೇಷ ಸಂಚಿಕೆ, ಎಐಡಿವೈಓ-ರಾಜ್ಯ ಸಮಿತಿಯ ಮುಖ ಪತ್ರಿಕೆ, ಪು. ಸಂ-೨೬
4. https://en.wikipedia.org/wiki/UNICEF Accessed on 24th July 2021
5. ಪ್ರಜಾವಾಣಿ ಕನ್ನಡ ದಿನಪತ್ರಿಕೆ, ಪು. ಸಂ-೮, ದಿನಾಂಕ: ೧೦-೩-೨೦೨೧

## References


Aidyo. (2021, December 1). Yuva Andolan. Yuva Andolan Special Sanchike, Pp. 26.

Chandra Poojari M., (2021), Laakdown, Kandilu Prakashana, Gaalemma Gudi, Hosapete.

Hasan, R. (2010). Mahile Mattu Aadhunikateya Savalugalu, Prasaranga Kannada University, Hampi.

Justice Kottapalli Punnayya Translated By Sujnanamurthy. B., (2020), Ambedkar Drustiyalli Saamaajika Nayaaya, Ladayi Prakashana, Gadag.

Prajawani, (2021, March 10). Ankana Prajawani, Pp. 8.

Prajawani, (2021, May 13). Ankana Prajawani, Pp. 2.

Shettiker, C.R. Kambar (2020), Yadagiri Jilleya Saamajika Avalokana, Gayatri Publication, Ballary.

Shettikera C. R. Kambar, (2019), Social Crises. Yadagiri, Gayatri Publication, Ballary.

Umesh H.S., A., (2021), Aruhu Kuruhu, Journal Vol 12, Issu 45, July-Sep 2021, Mysore.



## Funding

No funding was received for conducting this study.


## Conflict of interest

The authors have no conflicts of interest to declare that they are relevant to the content of this article.


## About the License

© The author(s) 2021. The text of this article is open access and licensed under a Creative Commons Attribution 4.0 International License



## Cite this Article

Chendappa Rajappa Kambar & Geeta Rajashekhar Pattar, The impact of Education on the Student, Family and Society as a result of Covid-19 in India, Vol 2, Iss 4 (2021) 11-18. DOI: https://doi.org/10.54392/ijmrd2142